KAUKA20006662022

Presented on : 23-05-2022
Registered on : 24-05-2022
Decided on : 07-09-2026
Duration: 4 years, 3 months, 15 days

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯ, ಶಿರಸಿ.**
**ಸಂಚಾರಿ ನ್ಯಾಯಾಲಯ, ಸಿದ್ದಾಪುರ.**

**ಉಪಸ್ಥಿತರುಃ- ಶ್ರೀಮತಿ ಶಾರದಾದೇವಿ ಸಿ.ಹಟ್ಟಿ** ಬಿ.ಕಾಂ., ಎಲ್.ಎಲ್.ಬಿ., (ಸ್ಪೆಷಲ್),
**ಹಿರಿಯ ಸಿವಿಲ್ ಮತ್ತು ಪ್ರಧಾನ ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಶಿರಸಿ.**

**ಆರ್.ಎ. ಸಂಖ್ಯೆ 19/2022 ಮತ್ತು 21/2022**

ದಿನಾಂಕ 7 ನೇ ಸೆಪ್ಟೆಂಬರ್ 2026

**ಆರ್.ಎ.ಸಂಖ್ಯೆ:19/2022 ಮತ್ತು 21/2022 ರಲ್ಲಿ ಮೇಲ್ಮನವಿದಾರರುಃ-**

1. ನೇತ್ರಾವತಿ ಕೋಂ ಮಂಜುನಾಥ ಗೌಡ,
   ವಯಸ್ಸುಃ54 ವರ್ಷ, ಉದ್ಯೋಗಃ ರೈತ,
   ವಾಸಃನೊಗನ್ಮನೆ, ಹೊನ್ನೆಹದ್ದ ಗ್ರಾಮ,
   ತಾಃಸಿದ್ದಾಪುರ, ಉ.ಕ.
   ಹಾಲಿ ವಾಸಃಎಮ್.ಐಜಿ 145,
   5 ನೇ ಕ್ರಾಸ್, ನವನಗರ,
   ಹುಬ್ಬಳ್ಳಿ-580025.

2. ಪ್ರಭಾಕರ ತಂದೆ ಮಂಜುನಾಥ ಗೌಡ,
   ವಯಸ್ಸುಃ33 ವರ್ಷ, ಉದ್ಯೋಗಃ ರೈತ,
   ವಾಸಃನೊಗನ್ಮನೆ, ತಾಃಸಿದ್ದಾಪುರ.
   ಹಾಲಿ ವಾಸಃ ವೆಟರ್ನ್ಸ್, ಬ್ಲೂವಿಡಿ ಅಪಾರ್ಟ್ ವೆಂಟ್,

348, ರೆಡವುಡ್ ಸಿಟಿ, ಎಸ್.ಎ.94063, ನಿಷ್ವತ್
ಜಿ.ಪಿ.ಎ ಹೋಲ್ಡರ್, ಧನಂಜಯ ತಂದೆ ಮಂಜುನಾಥ ಗೌಡ,
ವಯಸ್ಸುಃ32 ವರ್ಷ, ಉದ್ಯೋಗಃ ಸೇವೆ,
ವಾಸಃನೊಗನ್ಮನೆ, ಹೊನ್ನೆಹದ್ದ ಗ್ರಾಮ,
ತಾಃಸಿದ್ದಾಪುರ. ಹಾಲಿ ವಾಸಃ ಎಮ್.ಐ.ಜಿ 145,
5 ನೇ ಕ್ರಾಸ್, ನವನಗರ, ಹುಬ್ಬಳ್ಳಿ-580025.

3. ಧನಂಜಯ ತಂದೆ ಮಂಜುನಾಥ ಗೌಡ,
ವಯಸ್ಸುಃ32 ವರ್ಷ, ಉದ್ಯೋಗಃ ಸೇವೆ,
ವಾಸಃನೊಗನ್ಮನೆ, ಹೊನ್ನೆಹದ್ದ ಗ್ರಾಮ,
ತಾಃಸಿದ್ದಾಪುರ.
ಹಾಲಿ ವಾಸಃಎಮ್.ಐ.ಜಿ 145,
5 ನೇ ಕ್ರಾಸ್, ನವನಗರ, ಹುಬ್ಬಳ್ಳಿ-580025.

(ಮೇಲ್ಮನವಿದಾರರ ಪರ ವಕೀಲರು - ಶ್ರೀ ಜಿ.ಎಸ್.ಹೆಚ್)

**ವಿರುದ್ಧ**

**ಆರ್.ಎ.ಸಂಖ್ಯೆ:19/2022 ರ ಎದುರುದಾರರುಃ-**

1. ಗಿರಿಜಾ ಕೋಂ ಶ್ರೀಧರ ಗೌಡ,
ವಯಸ್ಸುಃ46 ವರ್ಷ,
ಉದ್ಯೋಗಃಮನೆವಾರ್ತೆ/ರೈತ,
ವಾಸಃನೊಗನ್ಮನೆ, ಹೊನ್ನೆಹದ್ದ ಗ್ರಾಮ,
ತಾಃಸಿದ್ದಾಪುರ, ಉ.ಕ.

2. ರತ್ನಾವತಿ ತಂದೆ ಶ್ರೀಧರ ಗೌಡ,
ವಯಸ್ಸುಃ25 ವರ್ಷ,
ಉದ್ಯೋಗಃಮನೆವಾರ್ತೆ/ರೈತ,
ವಾಸಃನೊಗನ್ಮನೆ, ಹೊನ್ನೆಹದ್ದ ಗ್ರಾಮ,
ತಾಃಸಿದ್ದಾಪುರ, ಉ.ಕ.

3. ಗೀತಾ ತಂದೆ ಶ್ರೀಧರ ಗೌಡ,
ವಯಸ್ಸುಃ23 ವರ್ಷ,

ಉದ್ಯೋಗಃಮನೆವಾರ್ತೆ/ರೈತ,
ವಾಸಃನೊಗನ್ಮನೆ,
ಹೊನ್ನೆಹದ್ದ ಗ್ರಾಮ,
ತಾಃಸಿದ್ದಾಪುರ, ಉ.ಕ.

4. ಧನ್ಯಾ ತಂದೆ ಶ್ರೀಧರ ಗೌಡ,
ವಯಸ್ಸುಃ19 ವರ್ಷ,
ಉದ್ಯೋಗಃಮನೆವಾರ್ತೆ/ರೈತ,
ವಾಸಃನೊಗನ್ಮನೆ, ಹೊನ್ನೆಹದ್ದ ಗ್ರಾಮ,
ತಾಃಸಿದ್ದಾಪುರ, ಉ.ಕ.

5. ಗೌರಿ ಕೋಂ ಗಣಪತಿ ಗೌಡ,
ವಯಸ್ಸು.58 ವರ್ಷ,
ಉದ್ಯೋಗಃಮನೆವಾರ್ತೆ,
ವಾಸ.ಹೆಮ್‌ಗಾರ್, ಪೋಃಹಲಗೇರಿ,
ತಾಃಸಿದ್ದಾಪುರ, ಉ.ಕ.

6. ಲಕ್ಷ್ಮೀ ಕೋಂ ಅಣ್ಣಪ್ಪ ಗೌಡ,
ವಯಸ್ಸು.55 ವರ್ಷ,
ಉದ್ಯೋಗಃಮನೆವಾರ್ತೆ,
ವಾಸ.ಹೆಮಜಾನಿ,
ಪೋಃಶಿವನಕೊಪ್ಪ,
ತಾಃಸಿದ್ದಾಪುರ, ಉ.ಕ.

7. ಕಮಲಾಕ್ಷಿ ಕೋಂ ಮಂಜುನಾಥ ಗೌಡ,
ವಯಸ್ಸು.50 ವರ್ಷ, ಉದ್ಯೋಗಃಮನೆವಾರ್ತೆ,
ವಾಸ.ಹೆಮ್‌ಗಾರ್, ಪೋಃಹಲಗೇರಿ,
ತಾಃಸಿದ್ದಾಪುರ, ಉ.ಕ.

8. ಶ್ರೀಧರ ತಂದೆ ರಾಮ ಗೌಡ,
ವಯಸ್ಸು.48 ವರ್ಷ, ಉದ್ಯೋಗಃರೈತ,
ವಾಸಃನೊಗನ್ಮನೆ, ಹೊನ್ನೆಹದ್ದ ಗ್ರಾಮ,

ತಾಃಸಿದ್ದಾಪುರ, ಉ.ಕ.

(1 ರಿಂದ 5 ನೇ ಎದುರುದಾರರ ಪರ ವಕೀಲರು – ಶ್ರೀ ಆರ್.ಜಿ..ಹೆಚ್(ಕೆ))

**ಆರ್.ಎ.ಸಂಖ್ಯೆ 21/2022 ರ ಎದುರುದಾರರುಃ–**

1. ಗೌರಿ ಕೋಂ ಗಣಪತಿ ಗೌಡ,
   ವಯಸ್ಸು.58 ವರ್ಷ,
   ಉದ್ಯೋಗಃಮನೆವಾರ್ತೆ,
   ವಾಸ.ಹೆಮ್‌ಗಾರ್,
   ಪೋಃಹಲಗೇರಿ,
   ತಾಃಸಿದ್ದಾಪುರ, ಉ.ಕ.

2. ಲಕ್ಷ್ಮೀ ಕೋಂ ಅಣ್ಣಪ್ಪ ಗೌಡ,
   ವಯಸ್ಸು.55 ವರ್ಷ,
   ಉದ್ಯೋಗಃಮನೆವಾರ್ತೆ,
   ವಾಸ.ಹೆಮಜಾನಿ,
   ಪೋಃಶಿವನಕೊಪ್ಪ,
   ತಾಃಸಿದ್ದಾಪುರ, ಉ.ಕ.

3. ಕಮಲಾಕ್ಷಿ ಕೋಂ ಮಂಜುನಾಥ ಗೌಡ,
   ವಯಸ್ಸು.50 ವರ್ಷ,
   ಉದ್ಯೋಗಃಮನೆವಾರ್ತೆ,
   ವಾಸ.ಹೆಮ್‌ಗಾರ್,
   ಪೋಃಹಲಗೇರಿ,
   ತಾಃಸಿದ್ದಾಪುರ, ಉ.ಕ.

4. ಶ್ರೀಧರ ತಂದೆ ರಾಮ ಗೌಡ,
   ವಯಸ್ಸು.48 ವರ್ಷ, ಉದ್ಯೋಗಃರೈತ,
   ವಾಸಃನೊಗನ್ಮನೆ, ಹೊನ್ನೆಹದ್ದ ಗ್ರಾಮ,
   ತಾಃಸಿದ್ದಾಪುರ, ಉ.ಕ.

(ಎದುರುದಾರರು – ಏಕತರ್ಫಿ ಉಳಿದಿರುತ್ತಾರೆ)

**ಆರ್.ಎ.ಸಂಖ್ಯೆ:19/2022 ಮತ್ತು 21/2022**

ಮೇಲ್ಮನವಿಗಳು ದಾಖಲು ಮಾಡಿದ
ದಿನಾಂಕ – 24-05-2022

ಮೇಲ್ಮನವಿಗಳ ಸ್ವರೂಪ – ವಿಚಾರಣಾ ನ್ಯಾಯಾಲಯದ ಅಸಲು ದಾವಾ ಸಂಖ್ಯೆ:106/2016 ಮತ್ತು 32/2017 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಲು.

ತೀರ್ಪು ಘೋಷಣೆ ಮಾಡಿದ
ದಿನಾಂಕ – 07-09-2026

ಒಟ್ಟು ಕಾಲಾವಧಿ – ವರ್ಷಗಳು ತಿಂಗಳು ದಿನಗಳು
04 03 15

Digitally signed by SHARADA C HATTI
Location: Senior Civil Judge and Prl. JMFC Sirsi

**(ಶ್ರೀಮತಿ ಶಾರದಾದೇವಿ ಸಿ.ಹಟ್ಟಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಧಾನ ಜೆ.ಎಂ.ಎಫ್.ಸಿ., ಶಿರಸಿ.**
**ಸಂಚಾರಿ ನ್ಯಾಯಾಲಯ, ಸಿದ್ದಾಪುರ.**

**ತೀರ್ಪು**

ಮೇಲ್ಮನವಿದಾರರು ಮತ್ತು ಎದುರುದಾರರು ವಿಚಾರಣಾ ನ್ಯಾಯಾಲಯದಲ್ಲಿ ಮೂಲ ದಾವಾ ನಂ.106/2016 ಮತ್ತು 32/2017 ದಾವೆಗಳನ್ನು ಸಲ್ಲಿಸಿದ್ದು, ಎರಡು ದಾವೆಗಳನ್ನು ಒಟ್ಟುಗೂಡಿಸಿ ಆದೇಶ ಮಾಡಿರುವುದರಿಂದ ಸದರಿ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಮೇಲ್ಮನವಿದಾರರು ಆರ್.ಎ.ನಂ.19/2022 ಮತ್ತು 21/2022 ನ್ನು ಸಲ್ಲಿಸಿರುವುದರಿಂದ ಚರ್ಚೆಗೆ ಅನುಕೂಲವಾಗುವಂತೆ ಎರಡು ಮೇಲ್ಮನವಿಗಳನ್ನು ಒಟ್ಟೂಗೂಡಿಸಿ ಆರ್.ಎ.ನಂ.21/2022 ನ್ನು ಮುಖ್ಯ ಪ್ರಕರಣವನ್ನಾಗಿಸಿ ಆರ್.ಎ.ನಂ.19/2022 ಮೇಲ್ಮನವಿಯನ್ನು ಒಟ್ಟುಗೂಡಿಸಿರುತ್ತದೆ.

2. ಪಕ್ಷಗಾರರು ವಿಚಾರಣಾ ನ್ಯಾಯಾಲಯದಲ್ಲಿ ಯಾವ ಶ್ರೇಯಾಂಕದಲ್ಲಿದ್ದರೋ, ಸ್ಪಷ್ಟತೆ ಮತ್ತು ಅನುಕೂಲಕ್ಕಾಗಿ ಅದೇ ರೀತಿ ಅವರನ್ನು ಉಲ್ಲೇಖಿಸಲಾಗುತ್ತದೆ.

3. ಮೂಲ ದಾವಾ ನಂ.106/2016 ನ್ನು ಮೇಲ್ಮನವಿದಾರರು/ವಾದಿಯರು ದಾವಾ ಆಸ್ತಿಯಲ್ಲಿ 1/5 ಅಂಶ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೊಡಿಸಬೇಕೆಂದು ಕೋರಿ ದಾವಾ ಸಲ್ಲಿಸಿದ್ದು, ಸದರಿ ದಾವೆ ವಜಾ ಆಗಿರುತ್ತದೆ ಎಂದು ಸದರಿ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಮೇಲ್ಮನವಿದಾರರು ಆರ್.ಎ.ನಂ.21/2022 ನ್ನು ಸಲ್ಲಿಸಿದ್ದಾರೆ.

4. ಮೂಲ ದಾವಾ ನಂ.32/2017 ನ್ನು ಎದುರುದಾರರು ಮೃತ ರಾಮ ದ್ಯಾವಗೌಡ ಎನ್ನುವವರು ದಿನಾಂಕ 25/08/2015 ರಂದು ನೋಂದಾಯಿತ ಮರಣ ಶಾಸನವನ್ನು ಬರೆದುಕೊಟ್ಟಿದ್ದು, ಸದರಿ ಮರಣ ಶಾಸನದ ಪ್ರಕಾರ ಎದುರುದಾರರು/ವಾದಿಯರು ಸಂಪೂರ್ಣ ಮಾಲೀಕರೆಂದು ಘೋಷಣೆ ಮಾಡಬೇಕೆಂದು ಕೋರಿ ದಾವಾ ಸಲ್ಲಿಸಿದ್ದು, ಸದರಿ ದಾವೆ ಡಿಕ್ರಿ ಆಗಿರುತ್ತದೆ ಎಂದು ಸದರಿ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಆರ್.ಎ.ನಂ.19/2022 ನ್ನು ಸಲ್ಲಿಸಿದ್ದಾರೆ.

5. **<u>ಮೂಲ ದಾವೆ ನಂ.106/2016 ರ ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-</u>**

ದಾವಾ ಸರ್ವೆ ನಂ.114 ರಲ್ಲಿ 2 ಎಕರೆ 1 ಗುಂಟಾ ಖರಾಬು 7 ಗುಂಟಾ ಒಟ್ಟು ಕ್ಷೇತ್ರ 1 ಎಕರೆ 34 ಗುಂಟಾ ಜಮೀನು ವಾದಿ, ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಯಾಗಿದ್ದು, ಕುಟುಂಬದ ಮೂಲ ಪುರುಷ ರಾಮ ದ್ಯಾವಗೌಡ ಎನ್ನುವವರು ದಿನಾಂಕ 08/06/2016 ರಂದು ಮೃತಪಟ್ಟಿರುತ್ತಾರೆ. ವಾದಿ ಹಾಗೂ ಪ್ರತಿವಾದಿಯರು ಅವರ ವಾರಸುದಾರರಾಗಿದ್ದು, ಕುಟುಂಬದ ಮೂಲ ಪುರುಷನ ಹೆಂಡತಿ ಗಣಪಿ ಎನ್ನುವವರು 2011 ರಲ್ಲಿ ಮೃತಪಟ್ಟಿದ್ದಾರೆ.

ಕುಟುಂಬದ ಮೂಲ ಪುರುಷನ ಹಿರಿಯ ಮಗ ದಿನಾಂಕ 28/03/2012 ರಂದು ಮೃತರಾಗಿದ್ದಾರೆ. 1 ನೇ ವಾದಿ ಸದರಿ ಮಂಜುನಾಥಗೌಡ ಹೆಂಡತಿಯಾಗಿದ್ದು, ಉಳಿದ ವಾದಿಯರು ಮಕ್ಕಳಾಗಿರುತ್ತಾರೆ. ದಾವಾ ಆಸ್ತಿ ಅವಿಭಕ್ತ ಕುಟುಂಬದ ಆಸ್ತಿಯಾಗಿದ್ದು, ವಾದಿ ಹಾಗೂ ಪ್ರತಿವಾದಿಯರ ಮಧ್ಯದಲ್ಲಿ ವಿಭಾಗವಾಗಿರುವುದಿಲ್ಲ. ದಾವಾ ಆಸ್ತಿಯಲ್ಲಿ ಭಾಗ ಕೊಡುವಂತೆ ಪ್ರತಿವಾದಿಯರಿಗೆ ಕೇಳಿದಾಗ ಪ್ರತಿವಾದಿಯರು ನಿರಾಕರಿಸಿದ್ದರಿಂದ ದಾವೆಗೆ ವ್ಯಾಜ್ಯ ಕಾರಣ ಉಂಟಾಗಿದ್ದು, ವಾದಿಯರಿಗೆ ದಾವಾ ಆಸ್ತಿಯಲ್ಲಿ 1/5 ಅಂಶ ಭಾಗಾಂಶದ ಹಕ್ಕು ಇದೆ ಎಂದು ಘೋಷಣೆ ಮಾಡಬೇಕೆಂದು ಪ್ರಾರ್ಥಿಸಿದ್ದಾರೆ.

**6.** ದಾವೆಯನ್ನು ದಾಖಲಿಸಿಕೊಂಡು ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ ಕಳುಹಿಸಲಾಗಿ, ಪ್ರತಿವಾದಿಯರು ವಕೀಲರ ಮೂಲಕ ಹಾಜರಾಗಿ ತಮ್ಮ ಪರವಾಗಿ ಪ್ರತಿವಾದಪತ್ರವನ್ನು ಸಲ್ಲಿಸಿದ್ದಾರೆ.

**7. 4 ನೇ ಪ್ರತಿವಾದಿಯ ಪ್ರತಿವಾದಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿಂತಿದೆಃ-**

4 ನೇ ಪ್ರತಿವಾದಿಯು ಪ್ರತಿವಾದಪತ್ರದ ಎಲ್ಲ ವಿವರಗಳನ್ನು ಅಲ್ಲಗಳೆದಿರುತ್ತಾರೆ. ದಾವಾ ಆಸ್ತಿಯನ್ನು 4 ನೇ ಪ್ರತಿವಾದಿಯ ತಂದೆ ರಾಮ ದ್ಯಾವಗೌಡ ಎನ್ನುವವರು 1977 ರಲ್ಲಿ ಖರೀದಿಸಿ, ಸಾಗುವಳಿ ಮಾಡುತ್ತಾ ಬಂದಿದ್ದಾರೆ. ಸದರಿಯವರ ಜೀವಿತಾವಧಿಯಲ್ಲಿ ದಿನಾಂಕ 25/08/2015 ರಂದು ನೋಂದಾಯಿತ ಮರಣ ಶಾಸನವನ್ನು 4 ನೇ ಪ್ರತಿವಾದಿಯ ಹೆಂಡತಿ, ಮಕ್ಕಳ ಹೆಸರಿಗೆ ಬರೆಸಿ ಕೊಟ್ಟಿರುತ್ತಾರೆ. 4 ನೇ ಪ್ರತಿವಾದಿಯ ತಂದೆ ದಿನಾಂಕ 08/06/2016 ರಂದು ಮೃತರಾಗಿದ್ದು, ಸದರಿ ಮರಣ ಶಾಸನದ ಪ್ರಕಾರ 4 ನೇ ಪ್ರತಿವಾದಿಯ ಹೆಂಡತಿ, ಮಕ್ಕಳ ಹೆಸರಿಗೆ ಖಾತಾ ವರ್ಗಾವಣೆ ಮಾಡಲು ಸಿದ್ದಾಪುರ ತಹಶೀಲ್ದಾರ ಕಛೇರಿಗೆ ಅರ್ಜಿ ಸಲ್ಲಿಸಿದಾಗ, ವಾದಿಯರು ತಕರಾರು ಮಾಡಿದ್ದಾರೆ. 4 ನೇ ಪ್ರತಿವಾದಿಯ ಹೆಂಡತಿ, ಮಕ್ಕಳನ್ನು ದಾವೆಯಲ್ಲಿ

ಸೇರ್ಪಡೆ ಮಾಡದೆ ಇರುವುದರಿಂದ ದಾವೆಯು ಊರ್ಜಿತವಾಗುವುದಿಲ್ಲ. ಆದ್ದರಿಂದ ದಾವೆಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿದ್ದಾರೆ.

**8.** 4 ನೇ ಪ್ರತಿವಾದಿಯ ವಾರಸುದಾರರು ಮೂಲ ದಾವಾ ನಂ.32/2017 ನ್ನು ಸಲ್ಲಿಸಿ, 4 ನೇ ಪ್ರತಿವಾದಿ ಪ್ರತಿವಾದಪತ್ರದಲ್ಲಿ ಹೇಳಿದಂತೆ ದಿನಾಂಕ 25/08/2015 ರಂದು ರಾಮ ದ್ಯಾವಗೌಡ ಎನ್ನುವವರು 4 ನೇ ಪ್ರತಿವಾದಿಯ ಹೆಂಡತಿ, ಮಕ್ಕಳ ಪರವಾಗಿ ಬರೆದುಕೊಟ್ಟ ಮರಣ ಶಾಸನದ ಪ್ರಕಾರ ಸಂಪೂರ್ಣ ಮಾಲೀಕರು ಎಂದು ಘೋಷಣೆ ಮಾಡಬೇಕೆಂದು ದಾವಾ ಸಲ್ಲಿಸಿದ್ದಾರೆ.

**9.** ಮೂಲ ದಾವಾ ನಂ.106/2016 ರ ವಾದಿಯರು ಮೂಲ ದಾವಾ ನಂ.32/2017 ಕ್ಕೆ ಪ್ರತಿವಾದ ಪತ್ರವನ್ನು ಸಲ್ಲಿಸಿ, ಮೂಲ ದಾವಾ ನಂ.106/2016 ರಲ್ಲಿ ವಾದಪತ್ರದಲ್ಲಿ ಹೇಳಿದಂತೆ ತಮ್ಮ ಪ್ರತಿವಾದಪತ್ರದಲ್ಲಿ ದಾವಾ ಆಸ್ತಿ ವಾದಿ ಹಾಗೂ ಪ್ರತಿವಾದಿಯರು ಒಟ್ಟು ಕುಟುಂಬದ ಆಸ್ತಿಯಾಗಿದ್ದು, ದಾವಾ ಆಸ್ತಿಯಲ್ಲಿ 1/5 ಅಂಶ ಭಾಗಾಂಶ ಹಕ್ಕು ಇದೆ ಎಂದು ಘೋಷಣೆ ಮಾಡಬೇಕು ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೊಡಿಸಬೇಕೆಂದು ಕೋರಿದ್ದಾರೆ.

**10.** ಮೇಲಿನ ವಾದ ಪತ್ರ ಮತ್ತು ಪ್ರತಿವಾದಪತ್ರಗಳ ಆಧಾರದ ಮೇಲೆ ವಿಚಾರಣಾ ನ್ಯಾಯಾಲಯವು ಮೂಲ ದಾವೆ ನಂ.106/2016 ರಲ್ಲಿ ಈ ಕೆಳಕಂಡ ವಿವಾದಾಂಶಗಳನ್ನು ರಚಿಸಿರುತ್ತಾರೆ.

## Issues

1. Whether the plaintiffs prove that the suit schedule property is the joint family property of them and the defendants?

2. Whether the defendant No.4 proves that the suit schedule property is the self-acquired property of his deceased father Rama Dyava Gouda?

3. Whether the defendant No.4 proves that his deceased father executed Will on 25-08-2015 bequeathing suit property in favour of wife and children of defendant No.4?

4. Whether the defendant No.4 proves that the suit is bad for non joinder of necessary parties?

5. Whether the plaintiffs are entitled to the relief of partition and separate possession?

6. What order or decree?

**11.** ಮೇಲಿನ ವಾದ ಪತ್ರ ಮತ್ತು ಪ್ರತಿವಾದಪತ್ರಗಳ ಆಧಾರದ ಮೇಲೆ ವಿಚಾರಣಾ ನ್ಯಾಯಾಲಯವು ಮೂಲ ದಾವೆ ನಂ.32/2017 ರಲ್ಲಿ ಈ ಕೆಳಕಂಡ ವಿವಾದಾಂಶಗಳನ್ನು ರಚಿಸಿರುತ್ತಾರೆ.

**<u>Issues</u>**

1. Whether the plaintiffs prove that the suit schedule property is the self acquired property of deceased Rama Dyava Gouda/Testator of the Will dated 25-08-2015?

2. Whether the plaintiffs further prove that the deceased Rama Dyava Gouda executed the Will on 25-08-2015 bequeathing the suit schedule property in favour of the plaintiffs out of his volition free will and in disposal status of mind?

3. Whether the defendants No.1 to 3 prove that the said will is concocted and illegal?

4. Whether the plaintiffs are entitled to the relief of declaration?

5. What order or decree?

**12.** ವಿಚಾರಣಾ ನ್ಯಾಯಾಲಯದಲ್ಲಿ ಮೂಲ ದಾವಾ ನಂ.106/2016 ಮತ್ತು 32/2017 ದಾವೆಗಳನ್ನು ಒಟ್ಟುಗೂಡಿಸಿ, ಮೂಲ ದಾವಾ ನಂ.32/2017 ರಲ್ಲಿ ಸಾಮೂಹಿಕವಾಗಿ ಸಾಕ್ಷಿ ವಿಚಾರಣೆಗೆ ಒಳಪಡಿಸಿದ್ದಾರೆ. ಮೂಲ ದಾವಾ ನಂ.32/2017 ವಾದಪತ್ರದಲ್ಲಿ ಹೇಳಿದ ಸಂಗತಿಗಳನ್ನು ಸಾಭೀತುಪಡಿಸಲು ಮೂಲ ದಾವೆ ನಂ.32/2017 ನೇದರ 1 ನೇ ವಾದಿ ತನ್ನನ್ನು ಪಿ.ಡಬ್ಲೂ–1 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡು ತನ್ನ ಪರವಾಗಿ ಪಿ.ಡಬ್ಲೂ.2 ರಿಂದ 4 ರವರನ್ನು ಸಾಕ್ಷಿ ವಿಚಾರಣೆ ಮಾಡಿಸಿಕೊಂಡಿದ್ದಾರೆ. 11 ದಾಖಲೆಗಳನ್ನು ಹಾಜರುಪಡಿಸಿ ನಿಶಾನೆ.ಪಿ.1 ರಿಂದ 11 ಎಂದು ಗುರುತಿಸಿಕೊಂಡು ತಮ್ಮ ಪರ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ. ಮೂಲ ದಾವಾ ನಂ.106/2016 ರ 1 ನೇ ವಾದಿ ತನ್ನನ್ನೂ ಡಿ.ಡಬ್ಲ್ಯೂ.1 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡು 5 ದಾಖಲೆಗಳನ್ನು ಹಾಜರುಪಡಿಸಿ ನಿಶಾನೆ.ಡಿ.1 ರಿಂದ 5 ಎಂದು ಗುರುತಿಸಿಕೊಂಡಿದ್ದಾರೆ.

**13.** ವಿಚಾರಣಾ ನ್ಯಾಯಾಲಯವು ಮೇಲಿನ ವಿವಾದಾಂಶಗಳಿಗೆ ದಾವೆಯನ್ನು ವಿಚಾರಣೆ ಮಾಡಿದ ನಂತರ ಮೂಲ ದಾವೆ ನಂ.32/2017 ಮತ್ತು 106/2016 ರಲ್ಲಿ ಉಭಯ ಪಕ್ಷಗಾರರ ಸಾಕ್ಷಿ ವಿಚಾರಣೆ ಮಾಡಿಸಿಕೊಂಡು ಮೂಲ ದಾವಾ ನಂ.106/2016 ನ್ನು ವಜಾಗೊಳಿಸಿದ್ದು, ಮೂಲ ದಾವಾ ನಂ.32/217 ನ್ನು ಡಿಕ್ರಿ ಮಾಡಿದ್ದಾರೆ. ಸದರಿ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಮೂಲ ದಾವಾ ನಂ.106/2016 ರ ವಾದಿಯರು ಮತ್ತು 32/2017 ರ

ಪ್ರತಿವಾದಿಯರು ಎರಡು ದಾವೆಯ ತೀರ್ಪು ಮತ್ತು ಡಿಕ್ರಿಗಳನ್ನು ಪ್ರಶ್ನಿಸಿ ಆರ್.ಎ.ನಂ.19/2022 ಮತ್ತು 21/2022 ಗಳನ್ನು ಸಲ್ಲಿಸಿ, ಸದರಿ ತೀರ್ಪು ಮತ್ತು ಡಿಕ್ರಿಗಳಿಂದ ನೊಂದುಕೊಂಡ ಮೂಲ ದಾವೆ ನಂ.106/2016 ಮತ್ತು 32/2017ರ ತೀರ್ಪು ಮತ್ತು ಡಿಕ್ರಿಗಳನ್ನು ಪ್ರಶ್ನಿಸಿ ಪ್ರಸ್ತುತ ಮೇಲ್ಮನವಿಗಳನ್ನು ಈ ಕೆಳಕಂಡ ಕಾರಣಗಳಿಗಾಗಿ ಸಲ್ಲಿಸಿರುತ್ತಾರೆ.

14. **ಮೇಲ್ಮನವಿ ಸಂಖ್ಯೆ 19/2022 ಮತ್ತು 21/2022 ರಲ್ಲಿ ಮೇಲ್ಮನವಿದಾರರು ಈ ಕೆಳಕಂಡ ಕಾರಣಗಳಿಗಾಗಿ ತೀರ್ಪು ಮತ್ತು ಡಿಕ್ರಿಯನ್ನು ತಳ್ಳಿ ಹಾಕಬೇಕೆಂದು ಪ್ರಾರ್ಥಿಸಿಕೊಂಡಿದ್ದಾರೆ.**

ಎ) ವಿಚಾರಣಾ ನ್ಯಾಯಾಲಯವು ನೈಸರ್ಗಿಕ ನ್ಯಾಯತತ್ವಗಳಿಗೆ ವಿರುದ್ಧವಾಗಿ, ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಸದರಿ ತೀರ್ಪು ಮತ್ತು ಡಿಕ್ರಿಯನ್ನು ತಳ್ಳಿಹಾಕಬೇಕೆಂದು ಕೋರಿದ್ದಾರೆ.

ಬಿ) ವಿಚಾರಣಾ ನ್ಯಾಯಾಲಯವು ಉಭಯ ಪಕ್ಷಗಾರರ ಮೌಖಿಕ ಮತ್ತು ದಸ್ತಾವೇಜು ಸಾಕ್ಷಿಗಳನ್ನು ಸರಿಯಾಗಿ ಅವಲೋಕನೆ ಮಾಡಿರುವುದಿಲ್ಲ.

ಸಿ) ವಿಚಾರಣಾ ನ್ಯಾಯಾಲಯವು ಪಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿ, ದಾವಾ ಆಸ್ತಿಯನ್ನು ಖರೀದಿಸಿದ್ದಾರೆಂದು ಒಪ್ಪಿಕೊಂಡಿದ್ದರು, ಸದರಿ ಮೌಖಿಕ ಸಾಕ್ಷ್ಯವನ್ನು ಪರಿಗಣಿಸದೆ ದಾವೆಯನ್ನು ವಜಾಗೊಳಿಸಿರುವುದು ಸಮಂಜಸವಾಗಿರುವುದಿಲ್ಲ.

ಡಿ) ವಿಚಾರಣಾ ನ್ಯಾಯಾಲಯವು ಮರಣ ಶಾಸನವನ್ನು ಪಿ.ಡಬ್ಲ್ಯೂ.4 ರವರು ಅನುಪ್ರಮಾಣಿತ ಸಾಕ್ಷಿದಾರರಾಗಿ ಸಾಕ್ಷಿ ವಿಚಾರಣೆ ಮಾಡಿಸಿಕೊಂಡಿದ್ದರು ಕಾನೂನು ಪ್ರಕಾರ ಸಾಭೀತುಪಡಿಸದೆ ಇದ್ದರೂ ದಾವೆಯನ್ನು ಡಿಕ್ರಿ ಮಾಡಿರುವುದು ಸಮಂಜಸವಾಗಿರುವುದಿಲ್ಲ.

ಇ) ವಿಚಾರಣಾ ನಾಯಾಲಯವು ನಿಶಾನೆ.ಪಿ.1 ಮರಣ ಶಾಸನವನ್ನು ಮಾಡಿರುವುದು ಸಾಕಷ್ಟು

ಸಂಶಯಸ್ಪದ ಸಂಗತಿಗಳು ಕಂಡುಬಂದರೂ ಸಹ ಸದರಿ ಸಂಗತಿಗಳನ್ನು ವಿಚಾರಣಾ ನ್ಯಾಯಾಲಯ ಪರಿಗಣಿಸದೆ ಮೂಲ ದಾವಾ ನಂ.106/2016 ರ ವಾದಿಯರ ಸಾಕ್ಷಗಳನ್ನು ಪರಿಗಣಿಸದೆ ಮೂಲ ದಾವಾ ನಂ.32/2017 ರ ವಿವಾದಾಂಶಗಳಿಗೆ ಮಾತ್ರ ಉತ್ತರಿಸಿರುವುದು ಸಮಂಜಸವಾಗಿರುವುದಿಲ್ಲ.

ಎಫ್) ವಿಚಾರಣಾ ನ್ಯಾಯಾಲಯವು ಮೂಲ ದಾವಾ ನಂ.106/2016 ನ್ನು ವಜಾಗೊಳಿಸಿದ್ದು, ಮೂಲ ದಾವಾ ನಂ.32/2017 ನ್ನು ಡಿಕ್ರಿ ಮಾಡಿದ್ದು, ಸದರಿ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ ಈ ಮೇಲ್ಮನವಿಗಳನ್ನು ಪುರಸ್ಕರಿಸಬೇಕೆಂದು ಮೇಲ್ಮನವಿದಾರರು ಪ್ರಾರ್ಥಿಸಿಕೊಂಡಿರುತ್ತಾರೆ.

**15.** ಮೇಲ್ಮನವಿಗಳನ್ನು ದಾಖಲಿಸಿಕೊಂಡು ಎದುರುದಾರರಿಗೆ ನ್ಯಾಯಾಲಯದಿಂದ ನೋಟೀಸುಗಳನ್ನು ಕಳುಹಿಸಲಾಗಿ, ಎದುರುದಾರರು ವಕೀಲರ ಮೂಲಕ ಹಾಜರಾಗಿದ್ದಾರೆ. ಎದುರುದಾರರು ತಮ್ಮ ಪರವಾಗಿ ಯಾವುದೇ ತಕರಾರುಗಳನ್ನು ಸಲ್ಲಿಸಿರುವುದಿಲ್ಲ. ವಿಚಾರಣಾ ನ್ಯಾಯಾಲಯದಿಂದ ಕಡತಗಳನ್ನು ತರಿಸಿಕೊಂಡು, ಮೇಲ್ಮನವಿದಾರರ ಮತ್ತು ಎದರುದಾರರ ಪರ ವಕೀಲರ ವಾದವಿವಾದವನ್ನು ಆಲಿಸಲಾಯಿತು. ಈ ಪ್ರಕರಣಗಳನ್ನು ಅಂತಿಮವಾಗಿ ತೀರ್ಮಾನಕ್ಕೆ ಕೈಗೆತ್ತಿಗೊಂಡಿದೆ.

**16.** ಈ ಮೇಲ್ಮನವಿಗಳಲ್ಲಿ ತೀರ್ಮಾನಿಸಬೇಕಾದ ಅಂಶಗಳು ಈ ಕೆಳಗಿನಂತಿವೆ–

ಅಂಶ–1 ಮೇಲ್ಮನವಿದಾರರು ವಿಚಾರಣಾ ನ್ಯಾಯಾಲಯವು ದಿನಾಂಕ 11/04/2022 ರಂದು ಮೂಲ ದಾವಾ ನಂಃ106/2016 ಮತ್ತು 32/2017 ರಲ್ಲಿ ನೀಡಿರುವಂತಹ ತೀರ್ಪು ಮತ್ತು ಡಿಕ್ರಿಗಳು ಕಾನೂನುಬದ್ಧವಾಗಿಲ್ಲ ಎನ್ನುವುದನ್ನು ಸಾಭೀತುಪಡಿಸಿದ್ದಾರೆಯೇ?

ಅಂಶ–2 ವಿಚಾರಣಾ ನ್ಯಾಯಾಲಯವು ಮೇಲ್ಮನವಿದಾರರು ದಾವಾ ಆಸ್ತಿಯ ವಾದಿ ಹಾಗೂ ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿ ಎಂದು ಸಾಭೀತುಪಡಿಸಿದಾಗಲೂ ಕಾನೂನು ಸಂಗತಿಗಳನ್ನು ತಪ್ಪಾಗಿ ಅರ್ಥೈಸಿಕೊಂಡು ಮೇಲ್ಮನವಿದಾರರ ದಾವೆಯನ್ನು ವಜಾಗೊಳಿಸಿ ಎದುರುದಾರರ ದಾವೆಯನ್ನು ಕಾನೂನು ಸಂಗತಿಗಳಿಗೆ ವ್ಯತಿರಿಕ್ತವಾಗಿ ಡಿಕ್ರಿ ಮಾಡಿದ್ದಾರೆಂದು ಸಾಭೀತುಪಡಿಸಿದ್ದಾರೆಯೇ?

ಅಂಶ–3 ಯಾವ ಆದೇಶ?

17. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಗಿನಂತೆ ಉತ್ತರಿಸುತ್ತಿದ್ದೇನೆಃ–

ಅಂಶ–1 – ನಕಾರಾತ್ಮಕವಾಗಿ

ಅಂಶ–2 – ನಕಾರಾತ್ಮಕವಾಗಿ

ಅಂಶ–3 – ಅಂತಿಮ ಆದೇಶದಂತೆ

## ಕಾರಣಗಳು

18. **ಅಂಶ–1 ಮತ್ತು 2ಃ–** ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದ ವಿಷಯದ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಈ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ವಿಚಾರಣಾ ನ್ಯಾಯಾಲಯದ ಮೂಲ ದಾವಾ ನಂಃ106/2016 ಮತ್ತು 32/2017ರ ಸಂಪೂರ್ಣ ಕಡತಗಳನ್ನು ಗಮನಿಸಿದ್ದೇನೆ. ವಾದಿ ಮತ್ತು ಪ್ರತಿವಾದಿಗಳು ಸದರಿ ಮೂಲ ದಾವೆಗಳಲ್ಲಿ ಹಾಜರುಪಡಿಸಿರುವಂತಹ ಎಲ್ಲಾ ಮೌಖಿಕ ಸಾಕ್ಷಿ ಹಾಗೂ ದಾಖಲಾತಿ ಸಾಕ್ಷಿಗಳನ್ನು ಸಂಪೂರ್ಣವಾಗಿ ಅವಲೋಕಿಸಿದ್ದೇನೆ. ವಿಚಾರಣಾ ನ್ಯಾಯಾಲಯವು ಮೂಲ

ದಾವಾ ನಂ.106/2016 ಮತ್ತು 32/2017 ಎರಡು ದಾವೆಗಳನ್ನು ಸಾಮೂಹಿಕವಾಗಿ ಮೂಲ ದಾವಾ ನಂ.32/2017 ರಲ್ಲಿ ಸಾಕ್ಷಿ ವಿಚಾರಣೆಯನ್ನು ದಾಖಲಿಸಿಕೊಂಡಿದ್ದಾರೆ. ಮೂಲ ದಾವಾ ನಂ.32/2017 ರ ವಾದಿ ತನ್ನನ್ನೂ ಪಿ.ಡಬ್ಲ್ಯೂ.1 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡು ದಾವಾ ಆಸ್ತಿಯನ್ನು ತಮ್ಮ ಮಾವನಾದ ರಾಮಾ ದ್ಯಾವ ಗೌಡ ಎನ್ನುವವರು 1977 ರಲ್ಲಿ ಖರೀದಿಸಿದ್ದು, ಸದರಿ ಆಸ್ತಿಯು ಅವರ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ತಮ್ಮ ಜೀವಿತಾವಧಿಯಲ್ಲಿ ತನಗೆ ಮತ್ತು ಮಕ್ಕಳಿಗೆ ಹೋಗಬೇಕೆಂದು ದಿನಾಂಕ 25/08/2015 ರಂದು ನೋಂದಾಯಿತ ಮರಣ ಶಾಸನ ಬರೆಸಿಟ್ಟಿದ್ದಾರೆಂದು ಮರಣ ಶಾಸನವನ್ನು ಹಾಜರುಪಡಿಸಿ ನಿಶಾನೆ.ಪಿ.1 ಎಂದು ಗುರುತಿಸಿಕೊಂಡಿದ್ದಾರೆ. ರಾಮಾ ದ್ಯಾವ ಗೌಡ ಎನ್ನುವವರು ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿ ನಿಶಾನೆ.ಪಿ.2 ಎಂದು ಗುರುತಿಸಿಕೊಂಡಿದ್ದಾರೆ. ದಾವಾ ಆಸ್ತಿಯು ಪಿ.ಡಬ್ಲ್ಯೂ.1 ರವರು ಮಾವನ ಸ್ವಯಾರ್ಜಿತ ಆಸ್ತಿ ಎಂದು ಮ್ಯುಟೇಶನ್ ಪ್ರತಿಯನ್ನು ಹಾಜರುಪಡಿಸಿ ನಿಶಾನೆ.ಪಿ.3 ಎಂದು ಗುರುತಿಸಿಕೊಂಡಿದ್ದಾರೆ. ಪಿ.ಡಬ್ಲ್ಯೂ1 ರವರು ರಾಮಾ ದ್ಯಾವ ಗೌಡ ಎನ್ನುವವರು ಮೃತಪಟ್ಟ ನಂತರ ದಾವಾ ಆಸ್ತಿಯನ್ನು ಮರಣ ಶಾಸನದ ಪ್ರಕಾರ ಖಾತಾ ವರ್ಗಾವಣೆ ಮಾಡುವಂತೆ ಅರ್ಜಿ ಸಲ್ಲಿಸಿದ್ದು, ಅರ್ಜಿಯ ಪ್ರತಿಯನ್ನು ಹಾಜರುಪಡಿಸಿ ನಿಶಾನೆ.ಪಿ.4 ಎಂದು ಗುರುತಿಸಿಕೊಂಡಿದ್ದಾರೆ. ಪಿ.ಡಬ್ಲ್ಯೂ1 ರವರು ತಮ್ಮ ಮಾವನವರು ತಮ್ಮ ಜೀವಿತಾವಧಿಯಲ್ಲಿ ಹರ್ಸಿಕಟ್ಟಾ ವ್ಯವಸಾಯ ಸೇವಾ ಸಹಕಾರಿ ಸಂಘದಲ್ಲಿ ಸಾಲ ಪಡೆದಿದ್ದು, ಸದರಿ ಸಾಲವನ್ನು ಮರುಪಾವತಿಸಿದ ಬಗ್ಗೆ ದೃಢಿಕರಣ ಪತ್ರವನ್ನು ಹಾಜರುಪಡಿಸಿ ನಿಶಾನೆ.ಪಿ.5 ಎಂದು ಗುರುತಿಸಿಕೊಂಡಿದ್ದಾರೆ. ಸಾಲ ಪಾವತಿಸಿದ ರಶೀದಿಯನ್ನು ಹಾಜರುಪಡಿಸಿ ನಿಶಾನೆ.ಪಿ.9 ಎಂದು ಗುರುತಿಸಿಕೊಂಡಿದ್ದಾರೆ. ಪಿ.ಡಬ್ಲ್ಯೂ.1 ರವರು ಮಾವನ ಇಚ್ಚೆಯಂತೆ ಅವರ ಮೂರು ಜನ ಹೆಣ್ಣು ಮ್ಕಕಳಾದ 1 ರಿಂದ 3 ನೇ ಪ್ರತಿವಾದಿಯರಿಗೆ ತಲಾ ರೂ.5000/-ಗಳಂತೆ ಮನಿ ಅರ್ಡರ್ ಮಾಡಿದ ಬಗ್ಗೆ 3 ರಶೀದಿಗಳನ್ನು ಹಾಜರುಪಡಿಸಿ ನಿಶಾನೆ.ಪಿ.6 ರಿಂದ 8 ಎಂದು

ಗುರುತಿಸಿಕೊಂಡಿದ್ದಾರೆ. ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿ ನಿಶಾನೆ.ಪಿ.10 ಮತ್ತು 11 ಎಂದು ಗುರುತಿಸಿಕೊಂಡಿದ್ದಾರೆ.

**19.** ನಿಶಾನೆ.ಪಿ.1 ಮರಣ ಶಾಸನವನ್ನು ಸಾಭೀತುಪಡಿಸುವ ನಿಟ್ಟಿನಲ್ಲಿ ಮರಣ ಶಾಸನಕ್ಕೆ ಅನುಪ್ರಮಾಣಿತ ಸಾಕ್ಷಿದಾರರಾಗಿ ಸಹಿ ಮಾಡಿದ ಸುಬ್ರಾಯ್ ಗಣಪತಿ ಹೆಗಡೆ ಎನ್ನುವವರ ಸಹಿಗಳನ್ನು ಪಿ.ಡಬ್ಲ್ಯೂ.2 ರವರು ನೋಡಿ ಗುರುತಿಸಿದ್ದಾರೆ. ಮರಣ ಶಾಸನದ ಬರಹಗಾರರಾದ ಸುಬ್ರಾಯ ರಾಮಕೃಷ್ಣ ಹೆಗಡೆ ಎನ್ನುವವರನ್ನು ಪಿ.ಡಬ್ಲ್ಯೂ.3 ಸಾಕ್ಷಿ ವಿಚಾರಣೆ ಮಾಡಿಸಿಕೊಂಡಿದ್ದಾರೆ. ಸದರಿಯವರು ನಿಶಾನೆ.ಪಿ.1 ಮರಣ ಶಾಸನವನ್ನು ರಾಮಾ ದ್ಯಾವ ಗೌಡ ಎನ್ನುವವರು ಕೊಟ್ಟ ಮಾಹಿತಿಯ ಮೇರೆಗೆ ತಯಾರಿಸಿ ನೋಂದಣಿ ಮಾಡಿಸಿರುತ್ತೇನೆಂದು ಹೇಳಿದ್ದಾರೆ. ಪಿ.ಡಬ್ಲ್ಯೂ.3 ರವರು ತಮ್ಮ ಪಾಟೀ ಸವಾಲಿನಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲನೆ ಮಾಡಿದಾಗ ರಾಮಾ ದ್ಯಾವ ಗೌಡರ ಸ್ವಯಾರ್ಜಿತ ಆಸ್ತಿ ಎಂದು ಖಚಿತಪಡಿಸಿಕೊಂಡು ನಿಶಾನೆ.ಪಿ.1 ಮರಣ ಶಾಸನವನ್ನು ಬರೆದು ನೋಂದಣಿ ಮಾಡಿಸಿರುವುದಾಗಿ ಹೇಳಿದ್ದಾರೆ. ಇನ್ನೊಬ್ಬ ಅನುಪ್ರಮಾಣಿತ ಸಾಕ್ಷಿದಾರರಾದ ಅಣ್ಣಪ್ಪ ಗೌಡ ಎನ್ನುವವರನ್ನು ಪಿ.ಡಬ್ಲ್ಯೂ.4 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡಿದ್ದಾರೆ. ಸದರಿಯವರು ಮೂಲ ದಾವಾ ನಂ.106/2016 ರ 2 ನೇ ಪ್ರತಿವಾದಿಯ ಗಂಡನಾಗಿದ್ದು, ತನ್ನ ಮುಖ್ಯ ವಿಚಾರಣೆಯಲ್ಲಿ ವಾದಿ ಹಾಗೂ ಪ್ರತಿವಾದಿಯರ ಕುಟುಂಬದ ಬಗ್ಗೆ ಹೇಳಿದ್ದಾರೆ. ನಿಶಾನೆ.ಪಿ.1 ಮರಣ ಶಾಸನದ ಮೇಲಿರುವ ಸಹಿಗಳನ್ನು ಸಿದ್ದಾಪುರ ಸಬ್ ರಜಿಸ್ಟರ್ ಕಛೇರಿಯಲ್ಲಿ ಮಾಡಿರುತ್ತೇನೆಂದು ಒಪ್ಪಿಕೊಂಡಿದ್ದಾರೆ. ಆದರೆ ಮರಣ ಶಾಸನದಲ್ಲಿ ಬರೆದ ವಿವರಗಳನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ವಾದಿ ಪರ ವಕೀಲರು ಪಿ.ಡಬ್ಲ್ಯೂ.4 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದಾರೆ.

**20.** ಮೂಲ ದಾವಾ ನಂ.106/2016 ರ ವಾದಿಯರು ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಎಂದು ಸಾಧನೆ ಮಾಡುತ್ತಿದ್ದು, 1 ನೇ ವಾದಿಯು ವಾದಪತ್ರದಲ್ಲಿ ಹೇಳಿದ

ಸಂಗತಿಗಳನ್ನು ಸಾಭೀತುಪಡಿಸಲು ತನ್ನನ್ನು ಡಿ.ಡಬ್ಲೂ.1 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡು ವಾದಪತ್ರದಲ್ಲಿ ಹೇಳಿದಂತೆ ಪುನರುಚ್ಚರಿಸಿದ್ದಾರೆ. ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿ ನಿಶಾನೆ.ಡಿ.1 ಎಂದು ಗುರುತಿಸಿಕೊಂಡಿದ್ದಾರೆ. ವಾದಿ ಹಾಗೂ ಪ್ರತಿವಾದಿಯರ ಕುಟುಂಬದ ಬಂದಿಸರ ಗ್ರಾಮದ ಸರ್ವೆ ನಂ.60 ನ್ನು ಮಾರಾಟ ಮಾಡಿ ದಾವಾ ಆಸ್ತಿಯನ್ನು ಖರೀದಿಸಿದ್ದಾರೆಂದು ತೋರಿಸಲು ಬಂದಿಸರ ಗ್ರಾಮದ ಮ್ಯುಟೇಶನ ನಂ.293 ರ ದೃಢಿಕೃತ ನಕಲನ್ನು ಹಾಜರುಪಡಿಸಿ ನಿಶಾನೆ.ಡಿ.2 ಎಂದು ಗುರುತಿಸಿಕೊಂಡಿದ್ದಾರೆ. ವಾದಿಯರ ತಂದೆ ಮಂಜುನಾಥ ಮತ್ತು ಆತನ ತಂದೆ, ತಾಯಿ, ಸಹೋದರ ಮತ್ತು ಸಹೋದರಿಯರು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದ ಬಗ್ಗೆ ಪಡಿತರ ಚೀಟಿಯ ನಕಲು ಪ್ರತಿಯನ್ನು ಹಾಜರುಪಡಿಸಿ ನಿಶಾನೆ.ಡಿ.3 ಎಂದು ಗುರುತಿಸಿಕೊಂಡಿದ್ದಾರೆ. ಮಂಜುನಾಥ ರಾಮಾ ಗೌಡ ಎನ್ನುವವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿ ನಿಶಾನೆ.ಡಿ.4 ಎಂದು ಗುರುತಿಸಿಕೊಂಡಿದ್ದಾರೆ. ಪ್ರತಿವಾದಿಯರು 2 ನೇ ವಾದಿಯ ಸ್ಟೇಟಬ್ಯಾಂಕ್ ಆಫ್ ಮೈಸೂರಿನ ಖಾತಾ ಉತಾರವನ್ನು ಹಾಜರುಪಡಿಸಿ ಅದನ್ನು ನಿಶಾನೆ.ಡಿ.5 ಎಂದು ಗುರುತಿಸಿಕೊಂಡಿದ್ದಾರೆ.

**21.** ಮೇಲ್ಮನವಿದಾರರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಾದಿ ಹಾಗೂ ಪ್ರತಿವಾದಿಯರ ಕುಟುಂಬದ ಮೂಲ ಪುರಷ ರಾಮಾ ದ್ಯಾವ ಗೌಡ ಎನ್ನುವವರು ಬಂದಿಸರ ಗ್ರಾಮದ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿ ದಾವಾ ಆಸ್ತಿಯನ್ನು ಖರೀದಿಸಿರುವುದರಿಂದ ದಾವಾ ಆಸ್ತಿ ವಾದಿ ಹಾಗೂ ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ. ಕುಟುಂಬದ ಮೂಲ ಪರುಷ ರಾಮಾ ದ್ಯಾವ ಗೌಡ ಎನ್ನುವವರಿಗೆ ವಾದಿ ಹಾಗೂ ಪ್ರತಿವಾದಿಯರ ಸಮ್ಮತಿ ಇಲ್ಲದೆ ಮರಣ ಶಾಸನವನ್ನು ಬರೆಯುವ ಅಧಿಕಾರ ಇರುವುದಿಲ್ಲ. ಕುಟುಂಬದ ಮೂಲ ಪರುಷನಿಗೆ ಎಲ್ಲ ಮಕ್ಕಳ ಮೇಲೆ ಸಮನಾದ ಪ್ರೀತಿ ಇರುವುದರಿಂದ ಒಬ್ಬ ವಾರಸುದಾರರ ಪರವಾಗಿ ಮರಣ ಶಾಸನ ಬರೆಯುವ ಪ್ರಮೇಯ ಬರುವುದಿಲ್ಲ. ಶ್ರೀಧರ ಗೌಡ ಎನ್ನುವವರ ವಾರಸುದಾರರು

ಖೊಟ್ಟಿ ಮರಣ ಶಾಸನವನ್ನು ಸೃಷ್ಟಿ ಮಾಡಿಕೊಂಡಿದ್ದಾರೆ. ಪಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ತಮ್ಮ ಮಾವ ರಾಮಾ ದ್ಯಾವ ಗೌಡ ಬಂದಿಸರ ಆಸ್ತಿಯನ್ನು ಮಾರಾಟ ಮಾಡಿ ದಾವಾ ಆಸ್ತಿಯನ್ನು ಖರೀದಿಸಿದ್ದಾರೆಂದು ಒಪ್ಪಿಕೊಂಡಿದ್ದರು ಸದರಿ ಸಂಗತಿಗಳನ್ನು ಪರಿಗಣಿಸದೆ ಮೇಲ್ಮನವಿದಾರರು ಸಲ್ಲಿಸಿದ ಮೂಲ ದಾವಾ ನಂ.106/2016 ರಲ್ಲಿರುವ ವಿವಾದಾಂಶಗಳಿಗೆ ಕಾರಣಗಳನ್ನು ನೀಡದೆ ದಾವೆಯನ್ನು ವಜಾಗೊಳಿಸಿರುವುದು ನ್ಯಾಯಸಮ್ಮತವಾಗಿರುವುದಿಲ್ಲ. ನಿಶಾನೆ.ಪಿ.1 ಮರಣ ಶಾಸನವನ್ನು ವಾದಿಯರು ಹಿಂದೂ ಉತ್ತಾರಾಧಿಕಾರ ಅಧಿನಿಯಮದಡಿ ಸಾಭೀತುಪಡಿಸದೆ ಇದ್ದರೂ ಮೂಲ ದಾವಾ ನಂ.32/2017 ನ್ನು ಡಿಕ್ರಿ ಮಾಡಿರುವುದು ನ್ಯಾಯಸಮ್ಮತವಾಗಿರುವುದಿಲ್ಲ. ಆದ್ದರಿಂದ ವಿಚಾರಣಾ ನ್ಯಾಯಾಲಯದ ತೀರ್ಪುಗಳಲ್ಲಿ ಹಸ್ತಕ್ಷೇಪ ಮಾಡಿ ಮೇಲ್ಮನವಿಗಳನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿದ್ದಾರೆ.

**22.** ಎದುರುದಾರರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ದಾವಾ ಆಸ್ತಿಯು ರಾಮಾ ದ್ಯಾವ ಗೌಡ ಎನ್ನುವವರ ಸ್ವಯಾರ್ಜಿತ ಆಸ್ತಿಯಾಗಿದ್ದು, ಅವರ ಮೂರು ಜನ ಹೆಣ್ಣು ಮಕ್ಕಳಿಗೆ ವಿವಾಹವಾಗಿದ್ದು, ಮಂಜುನಾಥ ಎನ್ನುವ ಗಂಡು ಮಗ ಮೃತಪಟ್ಟಿದ್ದು, ಅತನ ಮಕ್ಕಳು ಹುಬ್ಬಳ್ಳಿ ಮತ್ತು ವಿದೇಶದಲ್ಲಿ ನೌಕರಿ ಮಾಡುತ್ತಾ ಮಂಜುನಾಥನ ವಾರಸುದಾರರು ಹುಬ್ಬಳ್ಳಿಯಲ್ಲಿ ವಾಸವಾಗಿರುವುದರಿಂದ, ಇನ್ನೊಬ್ಬ ಗಂಡು ಮಗನಾಗದ ಶ್ರೀಧರ ಮತ್ತು ಆತನ ಹೆಂಡತಿ, ಮಕ್ಕಳು ರಾಮಾ ದ್ಯಾವ ಗೌಡ ಎನ್ನುವವರ ಜೊತೆಗೆ ಇದ್ದು, ಅವರ ಎಲ್ಲ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರುವುದರಿಂದ ಮತ್ತು ಇನ್ನೊಬ್ಬ ಮಗನ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿ ಒಳ್ಳೆಯ ಕೆಲಸ ಮಾಡುತ್ತಾ, ಆರ್ಥಿಕವಾಗಿ ಸಬಲರಾಗಿರುವುದರಿಂದ ಮತ್ತು ಹೆಣ್ಣು ಮಕ್ಕಳಿಗೂ ಒಳ್ಳೆಯ ಮನೆಗೆ ಮದುವೆ ಕೊಟ್ಟಿರುವುದರಿಂದ ಶ್ರೀಧರ ಗೌಡ ಎನ್ನುವವರ ಹೆಂಡತಿ ಮಕ್ಕಳ ಪರವಾಗಿ ನಿಶಾನೆ.ಪಿ.1 ರಂತೆ ನೋಂದಾಯಿತ ಮರಣ ಶಾಸನವನ್ನು ಬರೆದುಕೊಟ್ಟಿದ್ದಾರೆ. ಸದರಿ ಮರಣ ಶಾಸನವನ್ನು ಹಿಂದೂ ಉತ್ತಾರಾಧಿಕಾರದ ಅಧಿನಿಯಮದ ಕಲಂ 63 ಮತ್ತು ಭಾರತೀಯ ಸಾಕ್ಷ್ಯ

ಅಧಿನಿಯಮದ ಕಲಂ 68 ರಡಿ ವಾದಿಯರು ಅನುಪ್ರಮಾಣಿತ ಸಾಕ್ಷಿದಾರರ ಮೂಲಕ ಯುಕ್ತ ಸಂಶಯ ಮೀರಿ ಸಾಭೀತುಪಡಿಸಿದ್ದಾರೆಂದು ವಿಚಾರಣಾ ನ್ಯಾಯಾಲಯ ಕಾರಣ ನೀಡಿರುವುದು ಸಮಂಜಸವಾಗಿರುತ್ತದೆ. ಪಿ.ಡಬ್ಲ್ಯೂ.2 ರವರು ಅನುಪ್ರಮಾಣಿತ ಸಾಕ್ಷಿದಾರರ ಸಹೋದರನಾಗಿದ್ದು, ಆತನು ತನ್ನ ಸಹೋದರ ಮರಣ ಶಾಸನಕ್ಕೆ ಸಹಿ ಮಾಡಿರುವುದನ್ನು ಮತ್ತು ತನ್ನ ಸಹೋದರನ ಸಹಿ ನೋಡಿ ಗುರುತಿಸಿದ್ದಾರೆ. ಪಿ.ಡಬ್ಲ್ಯೂ.3 ವಕೀಲರಾಗಿದ್ದು, ರಾಮಾ ದ್ಯಾವ ಗೌಡ ಎನ್ನುವವರು ಕೊಟ್ಟ ಮೌಖಿಕ ಮಾಹಿತಿ ಮತ್ತು ದಾಖಲೆಗಳನ್ನು ಪರಿಶೀಲಿಸಿ ರಾಮಾ ದ್ಯಾವ ಗೌಡ ಎನ್ನುವವರ ಸ್ವಯಾರ್ಜಿತ ಆಸ್ತಿ ಎಂದು ಖಚಿತಪಡಿಸಿಕೊಂಡು ನಿಶಾನೆ.ಪಿ.1 ಮರಣ ಶಾಸನವನ್ನು ಬರೆದು ಸಾಕ್ಷಿದಾರರು ಮತ್ತು ರಾಮಾ ದ್ಯಾವ ಗೌಡರನ್ನು ಸಬ್ ರಜಿಸ್ಟರ್ ಕಛೇರಿಗೆ ಕರೆದುಕೊಂಡು ಹೋಗಿ ನೋಂದಣಿ ಮಾಡಿಸಿಕೊಟ್ಟಿರುವುದಾಗಿ ಹೇಳಿದ್ದಾರೆ. ಪತ್ರ ಬರಹಗಾರರು ಅನುಪ್ರಮಾಣಿತ ಸಾಕ್ಷಿದಾರರು ಎಂದು ಪರಿಗಣಿಸಲು ಬರುವುದಿಲ್ಲವೆಂದು ಮೇಲ್ಮನವಿದಾರರ ಪರ ವಕೀಲರ ವಾದವು ಸಮಂಜಸವಾಗಿರುವುದಿಲ್ಲ. ಯಾವುದೇ ಕಾನೂನಿನಲ್ಲಿ ಯಾವ ಸಾಕ್ಷಿದಾರರನ್ನು ಅನುಪ್ರಮಾಣಿತ ಸಾಕ್ಷಿದಾರರನ್ನು ಪರಿಗಣಿಸಬೇಕೆನ್ನುವ ಕುರಿತು ಯಾವುದೇ ಅಳತೆ ಗೋಲು ಇರುವುದಿಲ್ಲ. ಪಿ.ಡಬ್ಲ್ಯೂ3 ರವರು ನಿಶಾನೆ.ಪಿ.1 ಮರಣ ಶಾಸನವನ್ನು ರಾಮಾ ದ್ಯಾವ ಗೌಡ ರವರು ಸ್ವ ಇಚ್ಛೆಯಿಂದ ಮಾಹಿತಿ ಕೊಟ್ಟು ಬರೆಸಿದ್ದಾರೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಇನ್ನೊಬ್ಬ ಅನುಪ್ರಮಾಣಿತ ಸಾಕ್ಷಿದಾರರು ರಾಮಾ ದ್ಯಾವ ಗೌಡರ ಅಳಿಯನಾಗಿದ್ದು, ನಿಶಾನೆ.ಪಿ.1 ಕ್ಕೆ ಸಬ್ ರಜಿಸ್ಟರ ಕಛೇರಿಯಲ್ಲಿ ಸಹಿ ಮಾಡಿಕೊಂಡಿರುವುದನ್ನು ಒಪ್ಪಿದ್ದಾರೆ. ಆದರೆ ಇತರ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ. ರಾಮಾ ದ್ಯಾವ ಗೌಡರ ಮಗಳಾದ ಲಕ್ಷ್ಮೀ ಎನ್ನುವವರ ಗಂಡ ಅಣ್ಣಪ್ಪ ಗೌಡ ಪಿ.ಡಬ್ಲ್ಯೂ.4 ರವರು ಮರಣ ಶಾಸನದ ಬಗ್ಗೆ ಒಪ್ಪಿಕೊಂಡಲ್ಲಿ ತನ್ನ ಹೆಂಡತಿಗೆ ಪಾಲು ಸಿಗದೆ ಇರಬಹುದು ಎನ್ನುವ ತಜುವಿಜಿಯಲ್ಲಿ ಸಾಕ್ಷಿ ನುಡಿದಿರುತ್ತಾರೆ.

**23.** ಎದುರುದಾರರು ಮುಂದುವರೆದ ವಾದ ಮಂಡನೆಯಲ್ಲಿ ರಾಮಾ ದ್ಯಾವ ಗೌಡ

ಎನ್ನುವವರು ಬಂದಿಸರದಲ್ಲಿರುವ ಜಮೀನನ್ನು ಮಾರಾಟ ಮಾಡುವುದಕ್ಕಿಂತ ಮೊದಲೆ ದಾವಾ ಆಸ್ತಿಯನ್ನು ಖರೀದಿಸಿರುವುದರಿಂದ ದಾವಾ ಆಸ್ತಿಯು ರಾಮಾ ದ್ಯಾವ ಗೌಡರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಆದ್ದರಿಂದ ನಿಶಾನೆ.ಪಿ.1 ಮರಣ ಶಾಸನದ ಪ್ರಕಾರ ಶ್ರೀಧರ ಗೌಡ ಎನ್ನುವವರ ವಾರಸುದಾರರಿಗೆ ಮರಣ ಶಾಸನ ಬರೆದಿರುವಲ್ಲಿ ಯಾವುದೇ ಸಂಶಯಸ್ಪದ ಸಂಗತಿಗಳು ಕಂಡುಬರುವುದಿಲ್ಲವೆಂದು ವಿಚಾರಣಾ ನ್ಯಾಯಾಲಯ ಮೂಲ ದಾವಾ ನಂ.32/2017 ನ್ನು ಡಿಕ್ರಿ ಮಾಡಿರುವುದು ಸಮಂಜಸವಾಗಿರುವುದರಿಂದ ಪ್ರಸ್ತುತ ಮೇಲ್ಮನವಿಗಳನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿದ್ದಾರೆ.

**24.** ದಾವಾ ಆಸ್ತಿಯು ಮೂಲ ದಾವಾ ನಂ.106/2016 ರ ವಾದಿಯರು ರಾಮಾ ದ್ಯಾವ ಗೌಡ ಬಂದಿಸರದಲ್ಲಿರುವ ಆಸ್ತಿಯನ್ನು ಮಾರಾಟ ಮಾಡಿ ದಾವಾ ಆಸ್ತಿಯನ್ನು ಖರೀದಿಸಿರುವುದರಿಂದ ವಾದಿ ಹಾಗೂ ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿ ಎಂದು ಪ್ರತಿಪಾದಿಸುತ್ತಿದ್ದಾರೆ. ಸದರಿ ಸಂಗತಿಯನ್ನು ಪಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿದ್ದರು ವಿಚಾರಣಾ ನ್ಯಾಯಾಲಯ ಮೌಖಿಕ ಸಾಕ್ಷ್ಯಗಳನ್ನು ಅವಲೋಕಿಸುವಲ್ಲಿ ವಿಫಲವಾಗಿದೆ ಎಂದು ಮೇಲ್ಮನವಿದಾರರ ಪರ ವಕೀಲರು ವಾದ ಮಂಡಿಸಿದ್ದಾರೆ. ನಿಶಾನೆ.ಡಿ.2 ಬಂದಿಸರ ಗ್ರಾಮದ ಮ್ಯುಟೇಶನ್ ನಂ.293 ನ್ನು ಪರಿಶೀಲಿಸಲಾಗಿ ರಾಮಾ ದ್ಯಾವ ಗೌಡ ಎನ್ನುವವರಿಗೆ ಸರ್ವೆ ನಂ.60 ನ್ನು ದಿನಾಂಕ 17/11/1977 ರಂದು ಮಾರಾಟ ಮಾಡಿದ್ದಾರೆಂದು ಕ್ರಯದ ಮೌಲ್ಯ ರೂ.2,500/- ಎಂದು ನಮೂದಿಸಿದ್ದಾರೆ.

**25.** ಮೂಲ ದಾವಾ ನಂ.32/2017 ರ ವಾದಿಯರು ದಾವಾ ಆಸ್ತಿಯು ರಾಮಾ ದ್ಯಾವ ಗೌಡ ಎನ್ನುವವರ ಸ್ವಯಾರ್ಜಿತ ಆಸ್ತಿ ಎಂದು ನಿಶಾನೆ.ಪಿ.3 ಹೊನ್ನಗದ್ದೆ ಗ್ರಾಮದ ಮ್ಯುಟೇಶನ್ ನಂ.944 ಹಾಜರುಪಡಿಸಿದ್ದಾರೆ. ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ರಾಮಾ ದ್ಯಾವ ಗೌಡ ಎನ್ನುವವರು ದಿನಾಂಕ 15/11/1977 ರಂದು ರೂ.4000/- ಗಳಿಗೆ ದಾವಾ

ಆಸ್ತಿಯನ್ನು ಖರೀದಿಸಿದ್ದಾರೆ. ಮೇಲ್ಮನವಿದಾರರು ಬಂದಿಸರ ಗ್ರಾಮದ ಆಸ್ತಿಯನ್ನು ಮಾರಾಟ ಮಾಡಿ ದಾವಾ ಆಸ್ತಿಯನ್ನು ಖರೀದಿಸಿದ್ದಾರೆಂದು ತೋರಿಸಲು ಯಾವುದೇ ಕ್ರಯಪತ್ರವನ್ನು ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯನ್ನು ಖರೀದಿಸಿದ ನಂತರ ರಾಮಾ ದ್ಯಾವ ಗೌಡರವರು ಬಂದಿಸರ ಆಸ್ತಿಯನ್ನು ಮಾರಾಟ ಮಾಡಿದ್ದಾರೆ. ದಾವಾ ಆಸ್ತಿಯ ಕ್ರಯದ ಮೌಲ್ಯ ರೂ.4000/- ಆಗಿದ್ದು, ಬಂದಿಸರ ಆಸ್ತಿಯನ್ನು ರೂ.2,500/- ಗಳಿಗೆ ಮಾರಾಟ ಮಾಡಿದ್ದ ಬಗ್ಗೆ ನಿಶಾನೆ.ಡಿ.2 ರಲ್ಲಿ ನಮೂದಿಸಿದ್ದಾರೆ. ಪಿ.ಡಬ್ಲ್ಯೂ.2 ರವರ ತಂದೆಯಿಂದ ರಾಮಾ ದ್ಯಾವ ಗೌಡ ಎನ್ನುವವರು ದಾವಾ ಆಸ್ತಿಯನ್ನು ಖರೀದಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ರಾಮಾ ದ್ಯಾವ ಗೌಡ ಎನ್ನುವವರು ದಾವಾ ಆಸ್ತಿಯನ್ನು ತಮ್ಮ ತಂದೆ ಗಣಪತಿ ಸುಬ್ರಾಯ ಗೌಡ ಎನ್ನುವವರಿಂದ 1977 ರಲ್ಲಿ ರೂ.14,000/- ಗಳಿಗೆ ಖರೀದಿಸಿದ್ದಾರೆ. ಸದರಿ ಹಣವನ್ನು ರಾಮಾ ದ್ಯಾವ ಗೌಡ ತಮ್ಮ ಮನೆಯಲ್ಲಿ 17 ವರ್ಷಗಳ ಕಾಲ ಕೃಷಿ ಕೆಲಸ ಮಾಡಿ ತೀರಿಸಿದ್ದಾರೆಂದು ಹೇಳಿದ್ದಾರೆ. ಪಿ.ಡಬ್ಲ್ಯೂ.2 ರವರನ್ನು ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿ ರಾಮಾ ದ್ಯಾವ ಗೌಡ ಎನ್ನುವವರು ಬಂದಿಸರ ಆಸ್ತಿಯನ್ನು ಮಾರಾಟ ಮಾಡಿ ದಾವಾ ಆಸ್ತಿಯನ್ನು ಖರೀದಿಸಿದ್ದಾರೆಂದು ಸೂಚಿಸಿದ್ದಾರೆ. ಪಿ.ಡಬ್ಲ್ಯೂ.2 ರವರು ಅನುಪ್ರಮಾಣಿತ ಸಾಕ್ಷಿದಾರರ ಸಹೋದರನಾಗಿರುವುದರಿಂದ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 68 ರಡಿ ಸಾಕ್ಷಿ ವಿಚಾರಣೆಗೆ ಒಳಪಡಿಸಬೇಕಾಗುತ್ತದೆ. ಸದರಿ ಸಾಕ್ಷಿದಾರರು ನಿಶಾನೆ.ಪಿ.1 ರ ಮೇಲೆ ತನ್ನ ಸಹೋದರನ ಸಹಿಯನ್ನು ಗುರುತಿಸಿದ್ದಾರೆ.

**26.** ಮೇಲ್ಮನವಿದಾರರ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ಬಂದಿಸರ ಗ್ರಾಮದ ಆಸ್ತಿಯನ್ನು ಮಾರಾಟ ಮಾಡಿ ದಾವಾ ಆಸ್ತಿಯನ್ನು ಖರೀದಿಸಿದ್ದಾರೆಂದು ಪ್ರತಿಪಾದಿಸುತ್ತಿದ್ದಾರೆ. ದಾವಾ ಆಸ್ತಿಯನ್ನು ಬಂದಿಸರ ಆಸ್ತಿ ಮಾರಾಟ ಮಾಡುವುದಕ್ಕಿಂತ ಮೊದಲೇ ಖರೀದಿಸಿರುವುದರಿಂದ ದಾವಾ ಆಸ್ತಿಯ ಮೌಲ್ಯ ಬಂದಿಸರ ಆಸ್ತಿಯ ಮೌಲ್ಯಕ್ಕಿಂತ ಸಾಕಷ್ಟು

ಹೆಚ್ಚಾಗಿರುವುದರಿಂದ ದಾವಾ ಆಸ್ತಿಯ ರಾಮಾ ದ್ಯಾವ ಗೌಡರ ಸ್ವಯಾರ್ಜಿತ ಆಸ್ತಿ ಎಂದು ವಿಚಾರಣಾ ನ್ಯಾಯಾಲಯ ಕಾರಣಗಳನ್ನು ನೀಡಿರುವಲ್ಲಿ ಯಾವುದೇ ನ್ಯೂನತೆಗಳು ಕಂಡುಬರುವುದಿಲ್ಲ.

**27**. ನಿಶಾನೆ.ಪಿ.1 ಮರಣ ಶಾಸನವನ್ನು ಮೂಲ ದಾವಾ ನಂ.32/2017 ರ ವಾದಿಯರು ಸೃಷ್ಟಿ ಮಾಡಿಕೊಂಡಿದ್ದಾರೆಂದು ಪ್ರತಿಪಾದಿಸುತ್ತಿದ್ದಾರೆ. ಡಿ.ಡಬ್ಲ್ಯೂ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮತ್ತು ಪಾಟೀ ಸವಾಲಿನಲ್ಲಿ ತನ್ನ ಗಂಡ ಮೃತಪಟ್ಟ ನಂತರ ಹುಬ್ಬಳ್ಳಿಯಲ್ಲಿ ವಾಸವಾಗಿದ್ದೇನೆಂದು ನುಡಿದಿರುತ್ತಾರೆ. ತನ್ನ ಒಬ್ಬ ಮಗ ಹುಬ್ಬಳ್ಳಿಯಲ್ಲಿ ಮತ್ತು ಇನ್ನೊಬ್ಬ ಮಗ ಅಮೇರಿಕಾದಲ್ಲಿ ಇದ್ದಾನೆಂದು ಒಪ್ಪಿಕೊಂಡಿದ್ದಾರೆ. ರಾಮಾ ದ್ಯಾವ ಗೌಡ ಮೃತಪಡುವವರೆಗೆ ಆರೋಗ್ಯವಾಗಿದ್ದಾರೆಂದು ಒಪ್ಪಿಕೊಂಡಿದ್ದಾರೆ. ರಾಮಾ ದ್ಯಾವ ಗೌಡ ಎನ್ನುವವರು ಮಾಡಿದ ಸಾಲವನ್ನು ಮರುಪಾವತಿಸಿದ ಬಗ್ಗೆ ವ್ಯವಸಾಯ ಸೇವಾ ಸಹಕಾರಿ ಸಂಘ ಹರ್ಸಿಕಟ್ಟಾ ರವರು ನಿಶಾನೆ.ಪಿ.5 ರಂತೆ ದೃಢೀಕರಣ ಪತ್ರ ಮತ್ತು ನಿಶಾನೆ.ಪಿ.9 ರಂತೆ ರಶೀದಿಯನ್ನು ಹಾಜರುಪಡಿಸಿದ್ದಾರೆ. ಸದರಿ ದಾಖಲೆಗಳನ್ನು ಪರಿಶೀಲಿಸಲಾಗಿ ರಾಮಾ ದ್ಯಾವ ಗೌಡರ ಜೊತೆಗೆ ವಾದಿಯರು ವಾಸವಾಗಿದ್ದು, ಅವರ ಯೋಗಕ್ಷೇಮ ನೋಡಿಕೊಳ್ಳುತ್ತಾ ಬಂದಿರುವುರಿಂದ ಸ್ವ-ಇಚ್ಚೆಯಿಂದ ತನ್ನ ಅಳಿಯ ಪಿ.ಡಬ್ಲ್ಯೂ.4 ಸಮಕ್ಷಮ ನಿಶಾನೆ.ಪಿ.1 ರಂತೆ ಮರಣ ಶಾಸನವನ್ನು ಬರೆದಿದ್ದಾರೆ. ಪಿ.ಡಬ್ಲ್ಯೂ.4 ರವರು ಮರಣ ಶಾಸನಕ್ಕೆ ಸಬ್ ರಜಿಸ್ಟರ್ ಕಚೇರಿಯಲ್ಲಿ ಸಹಿ ಮಾಡಿರುವುದನ್ನು ಒಪ್ಪಿಕೊಂಡಿದ್ದಾರೆ. ಪಿ.ಡಬ್ಲ್ಯೂ.4 ರವರು ತಮ್ಮ ಸಾಕ್ಷ್ಯದಲ್ಲಿ ನಿಶಾನೆ.ಪಿ.1 ಮರಣ ಶಾಸನಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಮರಣ ಶಾಸನ ಬರೆದ ಬಗ್ಗೆ 2015 ರಲ್ಲಿಯೇ ಪಿ.ಡಬ್ಲ್ಯೂ.4 ರವರಿಗೆ ಮಾಹಿತಿ ಇದ್ದು, ಸದರಿ ಸಂಗತಿಯನ್ನು ರಾಮಾ ದ್ಯಾವ ಗೌಡರ ಹೆಣ್ಣು ಮಕ್ಕಳಿಗೆ ಸಹಜವಾಗಿ ಗೋತ್ತಾಗಿರುತ್ತದೆ. ಪಿ.ಡಬ್ಲ್ಯೂ.4 ರವರು ತನ್ನ ಹೆಂಡತಿಗೆ ಸಹಜವಾಗಿ ತಿಳಿಸಿರುತ್ತಾರೆ. ಪಿ.ಡಬ್ಲ್ಯೂ.4 ರವರು ಮರಣ ಶಾಸನದ ಬಗ್ಗೆ ಹೇಳಿದ್ದಲ್ಲಿ ತನ್ನ ಹೆಂಡತಿಗೆ ಬರುವ

ಪಾಲು ತಪ್ಪಿ ಹೋಗಬಹುದು ಎಂದು ನಿಶಾನೆ.ಪಿ.1 ಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುವುದರಿಂದ ಮರಣ ಶಾಸನ ಸಾಭೀತಾಗಿರುವುದಿಲ್ಲವೆಂದು ಮೇಲ್ಮನವಿದಾರರು ಪ್ರತಿಪಾದಿಸುತ್ತಿರುವುದು ನ್ಯಾಯಸಮ್ಮತವಾಗಿರುವುದಿಲ್ಲ. ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿಯಾಗಿದ್ದ ಪಕ್ಷದಲ್ಲಿ ರಾಮಾ ದ್ಯಾವ ಗೌಡರ ಹೆಣ್ಣು ಮಕ್ಕಳು ದಾವೆಯಲ್ಲಿ ತಮಗೂ ಭಾಗಾಂಶ ಕೊಡಬೇಕೆಂದು ಲಿಖಿತ ಹೇಳಿಕೆಯನ್ನು ಸಲ್ಲಿಸುತ್ತಿದ್ದರು. ವಾದಿಯರು ರಾಮಾ ದ್ಯಾವ ಗೌಡರ ಹೆಣ್ಣು ಮಕ್ಕಳಾದ 1 ರಿಂದ 3 ನೇ ಪ್ರತಿವಾದಿಯರಿಗೆ ಹಿಸ್ಸೆಯ ಬದಲಾಗಿ ತಲಾ ರೂ.5,000/- ಗಳನ್ನು 2019 ರಲ್ಲಿ ಮನಿ ಆರ್ಡರ್ ಮಾಡಿದ ಬಗ್ಗೆ ನಿಶಾನೆ.ಪಿ.6 ರಿಂದ 8 ರಶೀದಿಗಳನ್ನು ಹಾಜರುಪಡಿಸಿದ್ದಾರೆ. 1 ರಿಂದ 3 ನೇ ಪ್ರತಿವಾದಿಯರು ಸದರಿ ದಾಖಲೆಗಳನ್ನು ಅಲ್ಲಗಳೆದಿರುವುದಿಲ್ಲ. ದಾವಾ ಆಸ್ತಿಯು ರಾಮಾ ದ್ಯಾವ ಗೌಡರ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ತಮ್ಮ ಜೀವಿತಾವಧಿಯಲ್ಲಿ ವಾದಿಯರಿಗೆ ನಿಶಾನೆ.ಪಿ.1 ರಂತೆ ನೋಂದಾಯಿತ ಮರಣ ಶಾಸನವನ್ನು ಬರೆದುಕೊಟ್ಟಿದ್ದಾರೆಂದು ವಿಚಾರಣಾ ನ್ಯಾಯಾಲಯ ನೀಡಿದ ಕಾರಣಗಳಲ್ಲಿ ಯಾವುದೇ ನ್ಯೂನತೆಗಳು ಕಂಡುಬರುವುದಿಲ್ಲ. **ಆದ್ದರಿಂದ ಅಂಶ ನಂ.1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**28.ಅಂಶ-3ಃ-** ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದಃ

**ಆದೇಶ**

ಮೇಲ್ಮನವಿದಾರರು ಸಲ್ಲಿಸಿದಂತಹ ಈ ಮೇಲ್ಮನವಿಗಳನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

ಮೂಲ ದಾವೆ ನಂ.106/2016 ಮತ್ತು 32/2017 ರಲ್ಲಿ ದಿನಾಂಕಃ

11 /04/2022 ರಂದು ಸಿದ್ದಾಪುರ ಸಿವಿಲ್ ನ್ಯಾಯಾಲಯವು (ಕಿ.ವಿ.) ನೀಡಿರುವಂತಹ ತೀರ್ಪು ಮತ್ತು ಡಿಕ್ರಿ ಸಮಂಜಸವಾಗಿವೆ ಎಂದು ಎತ್ತಿ ಹಿಡಿಯಲಾಗಿದೆ.

ವಿಚಾರಣಾ ನ್ಯಾಯಾಲಯದ ಕಡತದ ಜೊತೆ ಈ ತೀರ್ಪಿನ ನಕಲನ್ನು ವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸಿಕೊಡತಕ್ಕದ್ದು.

ಅಸಲು ತೀರ್ಪನ್ನು ಆರ್.ಎ.ನಂ.21/2022 ರಲ್ಲಿಟ್ಟು ಅದರ ನಕಲನ್ನು ಮತ್ತು ಆರ್.ಎ.ನಂ.19/2022 ರಲ್ಲಿ ಇಡತಕ್ಕದ್ದು.

ಮೇಲ್ಕಂಡಂತೆ ಡಿಕ್ರಿ ಬರೆಯತಕ್ಕದ್ದು.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರ್ತಿಯಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 7 ನೇ ಸೆಪ್ಟೆಂಬರ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

Digitally signed by SHARADA C HATTI
Location: Senior Civil Judge and Prl. JMFC Sirsi

**(ಶ್ರೀಮತಿ ಶಾರದಾದೇವಿ ಸಿ.ಹಟ್ಟಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಧಾನ ಜೆ.ಎಂ.ಎಫ್.ಸಿ., ಶಿರಸಿ.**
**ಸಂಚಾರಿ ನ್ಯಾಯಾಲಯ, ಸಿದ್ದಾಪುರ.**